**O.S** 42/2010

**PW-5**

ಸಾಕ್ಷಿಗೆ ವಿಧಿಬದ್ಧವಾಗಿ ದಿನಾಂಕ **29.06.2024** ರಂದು ಪ್ರಮಾಣ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ.4 ರಿಂದ 8 ರವರ ಪರ ವಕೀಲರಾದಃ ಶ್ರೀ J.P ರವರಿಂದಃ-**

ನಾನು ಮೂಲತಃ ಆಲ್ದೂರಿನವನು. ಆಲ್ದೂರಿನಲ್ಲಿ ವಾಸ ಮಾಡುತ್ತಿರುವ ಎಲ್ಲರೂ ನನಗೆ ಪರಿಚಯ. ವಾದಿಯು ಭೋಗ್ಯಕ್ಕೆ ಸಂಬಂಧಿಸಿದ ದಾವೆಯನ್ನು ಹೂಡಿರುತ್ತಾರೆ. ದಾವಾ ಆಸ್ತಿಯ ಸರ್ವೆ ನಂಬರ್ **193**. ಬಸಪ್ಪ ರವರ ಪರಿಚಯ ನನಗೆ ಇತ್ತು. ಸದರಿ ಬಸವಪ್ಪರವರನ್ನು ಪೊಲೀಸ್ ಬಸಪ್ಪ ಎಂದು ಕರೆಯುತ್ತಿದ್ದರು ಎಂದರೆ ನಿಜ. ಪೊಲೀಸ್ ಬಸಪ್ಪರವರು ಆಲ್ದೂರಿನಲ್ಲಿ ಮೃತಪಟ್ಟಿರುತ್ತಾರೆ. ಪೊಲೀಸ್ ಬಸಪ್ಪ ರವರು ಮೈಸೂರಿನಲ್ಲಿ ಪೊಲೀಸ್ ವೃತ್ತಿಯನ್ನು ಮಾಡುತ್ತಿದ್ದರು ಎಂದರೆ ನಿಜ. ಪೊಲೀಸ್ ಬಸಪ್ಪ ರವರು ಮೈಸೂರಿನ ವಿಧ್ಯಾರಣ್ಯಪುರದಲ್ಲಿ ಮನೆಯನ್ನು ಮಾಡಿಕೊಂಡು ವಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಹಲವಾರು ಭಾರಿ ಮೈಸೂರಿನ ವಿಧ್ಯಾರಣ್ಯಪುರದಲ್ಲಿ ಇದ್ದ ಪೊಲೀಸ್ ಬಸಪ್ಪ ರವರ ಮನೆಗೆ ಹೋಗಿ ಬಂದಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪರವರ ಮಗ ಎನ್.ಬಿ ಶಿವಣ್ಣ ಎಂದರೆ ಸರಿಯಲ್ಲ. ಎನ್.ಬಿ ಶಿವಣ್ಣ ರವರು ಆಲ್ದೂರಿಗೆ ಬಂದು ದಾವಾ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಯಾರೂ ಬರುತ್ತಿರಲಿಲ್ಲ ತಾವು ಪಕ್ಕದ ಜಮೀನಿನವರೇ ಎಂದು ನುಡಿಯುತ್ತಾರೆ. ನನಗೂ ಮತ್ತು ಎನ್.ಬಿ ಶಿವಣ್ಣ ರವರಿಗೂ ಜಮೀನಿನ ಒತ್ತುವರಿ ವಿಚಾರವಾಗಿ ಗಲಾಟೆಯಾಗಿರುತ್ತದೆ ಎಂದರೆ ಸಾಕ್ಷಿಯು ತಾವು ಎನ್.ಬಿ ಶಿವಣ್ಣ ರವರನ್ನು ನೋಡೇ ಇಲ್ಲಾ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಪಕ್ಕದ ಜಮೀನು ನನ್ನದು ಎಂದರೆ ನಿಜ. ಪೊಲೀಸ್ ಬಸಪ್ಪ ರವರು ಮೈಸೂರಿನಲ್ಲಿ ಪೊಲೀಸ್ ವೃತ್ತಿಯನ್ನು ಮಾಡುತ್ತಿದ್ದ ಕಾರಣದಿಂದ ಅವರು ಆಲ್ದೂರಿಗೆ ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ರಜಾ ದಿನಗಳಲ್ಲಿ ಪೊಲೀಸ್ ಬಸಪ್ಪ ರವರು ಆಲ್ದೂರಿಗೆ ಬರುತ್ತಿದ್ದರು. ಪೊಲೀಸ್ ಬಸಪ್ಪರವರು ಆಲ್ದೂರಿಗೆ ಬಂದಾಗ ನಿಮ್ಮನ್ನು ಕರೆದು ಮಾತನಾಡಿಸುತ್ತಿದ್ದರೇ ಎಂಬ ಪ್ರಶ್ನೆಗೆ ಸಾಕ್ಷಿಯು ಪೊಲೀಸ್ ಬಸಪ್ಪ ರವರ ಪಕ್ಕದ ಮನೆಯೇ ತಮ್ಮದು ಆದ್ದರಿಂದ ಗೊತ್ತಾಗುತ್ತಿತ್ತು ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪರವರ ಮೃತ ದೇಹವನ್ನು ಮೈಸೂರಿನಲ್ಲಿ ಮಣ್ಣು ಮಾಡಲಾಗಿತ್ತು ಎಂದರೆ ಸಾಕ್ಷಿಯು

ಆಲ್ದೂರಿನಲ್ಲಿ ಮಣ್ಣು ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪ ರವರನ್ನು ಮೈಸೂರಿನಲ್ಲಿ ಮಣ್ಣು ಮಾಡಿದ್ದರೂ ಸಹ ಆಲ್ದೂರಿನಲ್ಲಿ ಮಣ್ಣು ಮಾಡಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪೊಲೀಸ್ ಬಸಪ್ಪರವರು ಪುಟ್ಟಮ್ಮ ರವರನ್ನು ಮದುವೆಯಾಗಿದ್ದರು ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪ ಮತ್ತು ಪುಟ್ಟಮ್ಮ ದಂಪತಿಗಳಿಗೆ ಜನಿಸಿದವರೆ ಎನ್.ಬಿ ಶಿವಣ್ಣ ಎಂದರೆ ಸರಿಯಲ್ಲ. ನಾನು ಪುಟ್ಟಮ್ಮ ಎಂಬುವವರನ್ನು ನೋಡಿಲ್ಲ. ವಾದಿಯು ಪೊಲೀಸ್ ಬಸಪ್ಪ ರವರ ಮಗ ಅಲ್ಲಾ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಬಸಪ್ಪ ಎಂಬ ಹೆಸರಿನ ಅನೇಕ ವ್ಯಕ್ತಿಗಳು ಇದ್ದಾರೆ ಎಂದರೆ ನಿಜ. ವಾದಿಯು ಯಾವುದೋ ಬೇರೆ ಬಸಪ್ಪನ ಮಗ ಹಾಗೂ ಪೊಲೀಸ್ ಬಸಪ್ಪ ರವರ ಮಗ ಅಲ್ಲಾ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ರುದ್ರಮ್ಮ ಹಾಗೂ ಪೊಲೀಸ್ ಬಸಪ್ಪ ರವರ ಮಗ ಪ್ರಭುಸ್ವಾಮಿ ಎಂದು ನುಡಿಯುತ್ತಾರೆ.

ಪೊಲೀಸ್ ಬಸಪ್ಪ ರವರು ರುದ್ರಮ್ಮ ರವರನ್ನು ಮದುವೆಯಾಗಿರುವುದರ ಬಗ್ಗೆ ನಾನು ದಾಖಲಾತಿಗಳನ್ನು ನೋಡಿಲ್ಲ. ರುದ್ರಮ್ಮ ರವರು ಪೊಲೀಸ್ ಬಸಪ್ಪ ರವರ ಹೆಂಡತಿ ಅಲ್ಲಾ ಎಂದರೆ ಸರಿಯಲ್ಲ. ಪೊಲೀಸ್ ಬಸಪ್ಪ ರವರು ತಮ್ಮ ಹೆಂಡತಿ ಪುಟ್ಟಮ್ಮ ರವರ ಜೊತೆ ಮೈಸೂರಿನ ವಿಧ್ಯಾರಣ್ಯಪುರದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ಪೊಲೀಸ್ ಬಸಪ್ಪ ರವರು ತಮ್ಮ ಹೆಂಡತಿಯಾದ ರುದ್ರಮ್ಮ ರವರ ಜೊತೆಯಲ್ಲಿಯೇ ಇದ್ದರು ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪ ರವರು ಆಲ್ದೂರಿನಲ್ಲಿ ಖಾಯಂ ಆಗಿ ನೆಲೆಸಿರಲಿಲ್ಲಾ ಎಂದರೆ ಸಾಕ್ಷಿಯು ಪೊಲೀಸ್ ಬಸಪ್ಪಾರವರು ಮೈಸೂರಿನಲ್ಲಿ ಪೊಲೀಸ್ ವೃತ್ತಿಯನ್ನು ಮಾಡುತ್ತಿದ್ದ ಕಾರಣದಿಂದ ಖಾಯಂ ಆಗಿ ನೆಲೆಸಿರಲಿಲ್ಲಾ ಆದರೆ ಹೋಗಿ ಬಂದು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಪೊಲೀಸ್ ಬಸಪ್ಪ ರವರು ತಮ್ಮ ಮಗನಾದ ಎನ್.ಬಿ ಶಿವಣ್ಣ ರವರಿಗೆ ದಾವಾ ಆಸ್ತಿಯನ್ನು ನೋಡಿಕೊಳ್ಳಲು ಹೇಳಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಎನ್.ಬಿ ಶಿವಣ್ಣ ರವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ರುದ್ರಮ್ಮ ರವರಿಗೂ ಹಾಗೂ ಪೊಲೀಸ್ ಬಸಪ್ಪ ರವರಿಗೂ ಯಾವುದೇ ಗಂಡ ಹೆಂಡತಿ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯು ಪೊಲೀಸ್ ಬಸಪ್ಪ ರವರ ಮಗ ಅಲ್ಲಾ ಎಂದರೆ ಸರಿಯಲ್ಲ. ನಾನು ವಾದಿಯ ಮಗನ ಮಾತನ್ನು ಕೇಳಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಲವಾರು ಭಾರಿ ಮೈಸೂರಿನಲ್ಲಿ ಇದ್ದ ಪೊಲೀಸ್ ಬಸಪ್ಪ ರವರ ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೈಸೂರಿನ ಪೊಲೀಸ್ ಬಸಪ್ಪ ರವರ

ಮನೆಯಲ್ಲಿ ಎನ್.ಬಿ ಶಿವಣ್ಣ ರವರನ್ನು ಸಹ ಮಾತನಾಡಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಎಲ್ಲಾ ಸತ್ಯಾಂಶಗಳು ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

29.06.2024.

ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದ ನ್ಯಾಯಾಲಯ ಯಳಂದೂರು.